**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 773 |
| ಸದಸ್ಯರ ಹೆಸರು | : | ಶ್ರೀ ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 10-03-2020 |
| ಉತ್ತರಿಸುವ ಸಚಿವರು | : | ಮಾನ್ಯ ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕಿನ ಗುಬ್ಬಿ ಪಟ್ಟಣ ಪಂಚಾಯಿತಿ ಯಾವ ದಿನಾಂಕದಿಂದ ಅಸ್ತಿತ್ವಕ್ಕೆ ಬಂದಿದೆ; ವಾರ್ಡ್‌ಗಳ ಸಂಖ್ಯೆ ಎಷ್ಟು; ಅವು ಯಾವುವು; ಪಂಚಾಯಿತಿ ಸರಹದ್ದು ಎಲ್ಲಿಯವರೆಗೆ ಇದೆ; (ವಿವರವಾದ ಮಾಹಿತಿ ನೀಡುವುದು) | ಅಧಿಸೂಚನೆ ಸಂಖ್ಯೆ ವನಇ 641 ಎಂಎಲ್‌ಆರ್ 95(13), ದಿನಾಂಕ 12.01.1996ರನ್ವಯ ಗುಬ್ಬಿ ಪಟ್ಟಣ ಪಂಚಾಯತಿಯು ಅಸ್ಥಿತ್ವಕ್ಕೆ ಬಂದಿರುತ್ತದೆ. ಸದರಿ ಅಧಿಸೂಚನೆಯಲ್ಲಿ ಗುಬ್ಬಿ ಪಟ್ಟಣ ಪಂಚಾಯತಿಯ ಸರಹದ್ದನ್ನು ಗುಬ್ಬಿ ಮಧ್ಯಂತರ ಮಂಡಲ ಪಂಚಾಯ್ತಿಯ ಹಾಲಿ ಪ್ರದೇಶ ಎಂದು ನಿಗದಿಪಡಿಸಲಾಗಿದೆ.<br>ಗುಬ್ಬಿ ಪಟ್ಟಣ ಪಂಚಾಯತಿಯಲ್ಲಿ ಒಟ್ಟು 19 ವಾರ್ಡುಗಳು ಇರುತ್ತವೆ. |
| (ಆ) | ಸದರಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಮಾರನಕಟ್ಟೆಯು ಇದೆಯೇ; ಹಾಗಾದಲ್ಲಿ, ಇದರ ವಿಸ್ತೀರ್ಣ ಎಷ್ಟು; ಮಾರನಕಟ್ಟೆಯ ಮಾಲೀಕರು ಯಾರು; (ವಿವರವಾದ ಮಾಹಿತಿ ನೀಡುವುದು) | ಗುಬ್ಬಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಮಾರನಕಟ್ಟೆಯು ಇದೆ. ಇದರ ವಿಸ್ತೀರ್ಣ 46.00 ಎಕರೆ ಆಗಿರುತ್ತದೆ. ಗುಬ್ಬಿ ಪಟ್ಟಣ ಪಂಚಾಯತಿಯ ಮಾಲೀಕತ್ವದಲ್ಲಿ ಮಾರನಕಟ್ಟೆಯು ಇರುತ್ತದೆ. |
| (ಇ) | ಮಾರನಕಟ್ಟೆಯ ಜಾಗದಲ್ಲಿ ಇಲ್ಲಿಯವರೆಗೆ ಯಾವ ಯಾವ ಇಲಾಖೆಗಳು ಹಾಗೂ ಸಂಘ-ಸಂಸ್ಥೆಗಳಿಗೆ ಜಮೀನನ್ನು ಮಂಜೂರು ಮಾಡಲಾಗಿದೆ; ಹಾಲಿ ಖಾಲಿಯಿರುವುದು ಎಷ್ಟು; (ವಿವರವಾದ ಮಾಹಿತಿ ನೀಡುವುದು) | ಮಾರನಕಟ್ಟೆಯ ಜಾಗದಲ್ಲಿ ಈ ಕೆಳಕಂಡ ಇಲಾಖೆಗಳು ಹಾಗೂ ಸಂಘಸಂಸ್ಥೆಗಳಿಗೆ ಜಮೀನನ್ನು ನೀಡಲಾಗಿರುತ್ತದೆ.<br>1) ಸಮಾಜ ಕಲ್ಯಾಣ ಇಲಾಖೆ(ಪರಿಶಿಷ್ಟ ಜಾತಿಯ ಬಾಲಕಿಯರ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ).<br>2) ನೀರಾವರಿ ಇಲಾಖೆ (ಹೇಮಾವತಿ ಕಛೇರಿ).<br>3) ನ್ಯಾಯಾಧೀಶರ ವಸತಿಗೃಹ.<br>4) ಅರಣ್ಯ ಇಲಾಖೆ ಕಛೇರಿ.<br>5) ಒಕ್ಕಲಿಗರ ಸಮುದಾಯ ಭವನ.<br>6) ಸಾರ್ವಜನಿಕ ಶಿಕ್ಷಣ ಇಲಾಖೆ(ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ).<br>7) ವೀರಶೈವ ಸಮಾಜ.<br>8) ಕೃಷಿ ಇಲಾಖೆ ಕಛೇರಿ.<br>9) ನಿವೃತ್ತ ನೌಕರರ ಸಂಘ ಕಟ್ಟಡ.<br>10) ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕಟ್ಟಡ.<br>11) ಚನ್ನಬಸವೇಶ್ವರ ಕೃಪಾ ಪೋಷಕ ನಾಟಕ ಮಂಡಳಿ ಕಟ್ಟಡ.<br>12)ವೈಷ್ಣವ ಸಮಾಜ<br>ಹಾಲಿ ಸುಮಾರು 25 ಎಕರೆ ಖಾಲಿ ಜಾಗ ಇರುತ್ತದೆ. |

| | | |
|---|---|---|
| (ಈ) | ಗುಬ್ಬಿ ಸರ್ಕಾರಿ ಬಸ್ ನಿಲ್ದಾಣದಿಂದ ಮಾರುಕಟ್ಟೆ ಪಕ್ಕದಲ್ಲಿ ಉತ್ತಮ ರಸ್ತೆ ನಿರ್ಮಿಸಲು ಪಟ್ಟಣ ಪಂಚಾಯಿತಿಯ ಸಿ.ಡಿ.ಪಿ.ಯಲ್ಲಿ ಸೇರಿಸಲಾಗಿದೆಯೇ? (ವಿವರವಾದ ಮಾಹಿತಿ ನೀಡುವುದು) | ಸ್ಥಳೀಯ ಯೋಜನಾ ಪ್ರದೇಶ ಘೋಷಣೆಯಾಗಿರುವುದಿಲ್ಲವಾದ್ದರಿಂದ ಸಿ.ಡಿ.ಪಿ.ಯನ್ನು ತಯಾರಿಸಿರುವುದಿಲ್ಲ. |

**ಸಂಖ್ಯೆ: ನಅಇ 09 ಎಲ್‌ಸಿಕ್ಯೂ 2020**

(ನಾರಾಯಣ ಗೌಡ)
ಪೌರಾಡಳಿತ, ತೋಟಗಾರಿಕೆ ಹಾಗೂ
ರೇಷ್ಮೆ ಸಚಿವರು